## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 910 (1028) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ<br>ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 16.12.2025 |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆ ಹುಮನಾಬಾದ ಪಟ್ಟಣದ ರಾಸಾಯನಿಕ ಹಾಗೂ ಟೈರ್ ಪೈರೋಲಿಸಿಸ್ ಕಾರ್ಖಾನೆಗಳಿಂದ ವಿಷಪೂರಿತ ತ್ಯಾಜ್ಯ ಹಾಗೂ ಗಾಳಿ ಹೊರ ಹಾಕುತ್ತಿರುವುದರಿಂದ ಸುತ್ತಮುತ್ತಲಿನ ಗ್ರಾಮದ ಜನರಿಗೆ ಹಾಗೂ ಹುಮನಾಬಾದ ಪಟ್ಟಣದ ಸಾರ್ವಜನಿಕರಿಗೆ ಹಾಗೂ ಪಶು ಪಕ್ಷಿಗಳು ಮಾರಣಾಂತಿಕ ಕಾಯಿಲೆಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು:</td><td rowspan="3">ಹುಮನಾಬಾದ್ ಕೈಗಾರಿಕಾ ಪ್ರದೇಶವು ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನಲ್ಲಿ 1983 ರಲ್ಲಿ ಸ್ಥಾಪನೆಯಾಗಿರುತ್ತದೆ. ಇದರ ಒಟ್ಟು ವಿಸ್ತೀರ್ಣ 482 ಎಕರೆ ಪ್ರದೇಶವಿದ್ದು, ಇದರಲ್ಲಿ ವಿವಿಧ ರೀತಿಯ ಕೈಗಾರಿಕೆಗಳು ಸ್ಥಾಪನೆಗೊಂಡಿದ್ದು, ಕಾರ್ಯಾಚರಣೆಯಲ್ಲಿರುತ್ತವೆ.<br><br>ಇವುಗಳಲ್ಲಿ ಪ್ರಮುಖವಾಗಿ 8 ಟೈರ್ ಪೈರೋಲಿಸಿಸ್ ಘಟಕಗಳು, 10 ಔಷಧಿ ತಯಾರಿಕಾ ಘಟಕಗಳು, 01 ಕೀಟನಾಶಕ ಘಟಕ, 03 ಸಾಲ್ವೆಂಟ್ ಮತ್ತು 01 ದ್ರವ ಬ್ರೋಮಿನ್ ಸಂಸ್ಕರಣಾ ರಿಕವರಿ ಘಟಕಗಳಿರುತ್ತವೆ.<br><br>ಸದರಿ ಔಷಧಿ ತಯಾರಿಕಾ ಘಟಕಗಳು ಮತ್ತು ಕೀಟನಾಶಕ ಘಟಕವು ಕೇಂದ್ರ ಸರ್ಕಾರದ ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006ರ ಅಡಿಯಲ್ಲಿ ಪರಿಸರ ವಿಮೋಚನಾ ಪತ್ರವನ್ನು ಪಡೆದ ನಂತರವೇ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981ರ ಅಡಿಯಲ್ಲಿ ಸ್ಥಾಪನೆಗಾಗಿ ಸಮ್ಮತಿ ಹಾಗೂ ಚಾಲನಾ ಸಮ್ಮತಿ ಪತ್ರವನ್ನು ನೀಡಿರುತ್ತದೆ.<br><br>ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಹುಮನಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಔಷಧಿ ತಯಾರಿಕಾ ಘಟಕಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ತಮ್ಮ ಉದ್ದಿಮೆಯಲ್ಲಿಯೇ ಸಂಸ್ಕರಿಸಿ, ಮರು ಬಳಕೆ ಮಾಡಲು ಸಂಸ್ಕರಣಾ ಘಟಕಗಳನ್ನು ಅಳವಡಿಸಿಕೊಳ್ಳಲು ಷರತ್ತು ವಿಧಿಸಿ ಸಮ್ಮತಿ ಪತ್ರವನ್ನು ನೀಡಲಾಗಿರುತ್ತದೆ.<br><br>ಎಲ್ಲಾ ಔಷಧಿ ತಯಾರಿಕಾ ಘಟಕಗಳು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ / ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ / ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ ತ್ಯಾಜ್ಯ ನೀರು ಸಂಸ್ಕರಣ ಘಟಕ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಸ್ಥಾಪಿಸಿ ಮಾಲಿನ್ಯ ನಿಯಂತ್ರಣ ಕ್ರಮವನ್ನು ತೆಗೆದುಕೊಂಡಿರುತ್ತಾರೆ.<br><br>ಮುಂದುವರೆದು ನಿಗದಿಪಡಿಸಿರುವಂತೆ Online Continuous Emission / Effluent Monitoring System (OCEMS) ಜೊತೆಗೆ Online Flow Meter ಮತ್ತು Camera</td></tr>
<tr><td>ಆ</td><td>ಕೈಗಾರಿಕೆಗಳಿಂದ ರಾಸಾಯನಿಕ ಮಿಶ್ರಿತ ನೀರು ಹಳ್ಳಕ್ಕೆ ಮತ್ತು ಕಾರಂಜಾ ಜಲಾಶಯಕ್ಕೆ ಸೇರುತ್ತಿರುವುದರಿಂದ ಈ ಭಾಗದ ರೈತರ ಹೊಲಗಳ ಬೋರವೆಲ್ ಮತ್ತು ಬಾವಿಗಳು ಕಲುಷಿತ ಗೊಳ್ಳುತ್ತಿರುವುದರಿಂದ ಜನರ ಜೀವಕ್ಕೆ ಅಪಾಯವಾದರೆ ಇದಕ್ಕೆ ಹೊಣೆ ಯಾರು:</td></tr>
<tr><td>ಇ</td><td>ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕೈಗಾರಿಕೆಗಳಿಗೆ ನೋಟಿಸ್ ನೀಡಿದ್ದರು ಸಹ ಕೈಗಾರಿಕೆಗಳ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರಲು ಕಾರಣವೇನು? ಮಾಹಿತಿ ನೀಡುವುದು</td></tr>
</table>

| | | |
|---|---|---|
| | | ವನ್ನು ಅಳವಡಿಸಿ, ಅದನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ Serverಗಳಿಗೆ ಜೋಡಿಸುವಂತೆ ಸೂಚಿಸಲಾಗಿರುತ್ತದೆ.<br><br>ಹುಮನಾಬಾದ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ 07 ಔಷಧ ಕಾರ್ಖಾನೆಗಳು, 01 ಅಪಾಯಕಾರಿ ತ್ಯಾಜ್ಯ Pre-Processing ಸಂಸ್ಕರಣಾ ಘಟಕ ಹಾಗೂ 08 ಟೈರ್ ಪೈರಾಲಿಸಿಸ್ ಘಟಕಗಳು ಮಂಡಳಿಯ ಸಮ್ಮತಿ ಪತ್ರದಲ್ಲಿ ವಿಧಿಸಿದ್ದ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ಜಲ ಕಾಯ್ದೆ, 1974 / ವಾಯು ಕಾಯ್ದೆ, 1981 ಅಡಿಯಲ್ಲಿ ಜುಲೈ / ಆಗಸ್ಟ್, 2024 ರಲ್ಲಿ ಮುಚ್ಚುವ ಆದೇಶವನ್ನು ನೀಡಲಾಗಿತ್ತು. ಮುಂದುವರೆದು, ಸದರಿ ಉದ್ದಿಮೆಗಳು ಮಂಡಳಿಯು ಸಮ್ಮತಿ ಪತ್ರದಲ್ಲಿ ವಿಧಿಸಿರುವ ಷರತ್ತಿನಂತೆ ಪಾಲಿಸುವುದಾಗಿ ಕೋರಿ ಮುಚ್ಚುವ ಆದೇಶವನ್ನು ತೆರವು ಗೊಳಿಸುವಂತೆ ಕೋರಿದ ಹಿನ್ನೆಲೆಯಲ್ಲಿ, ಮಂಡಳಿಯು ಹುಮನಾಬಾದ್ ಕೈಗಾರಿಕಾ ಪ್ರದೇಶಕ್ಕೆ ತಾಂತ್ರಿಕ ಅಧಿಕಾರಿಗಳ ತಂಡವನ್ನು ಕಳುಹಿಸಿ ವರದಿಯನ್ನು ಪಡೆದು, ಸದರಿ ತಾಂತ್ರಿಕ ತಂಡದ ವರದಿಯ ಶಿಫಾರಸ್ಸಿನಂತೆ 07 ಔಷಧ ಕಾರ್ಖಾನೆಗಳು ಹಾಗೂ 04 ಟೈರ್ ಪೈರಾಲಿಸಿಸ್ ಘಟಕಗಳಿಗೆ ಮುಚ್ಚುವ ಆದೇಶವನ್ನು ಸೆಪ್ಟೆಂಬರ್ / ಡಿಸೆಂಬರ್ 2024, ಜನವರಿ 2025 ಮತ್ತು ನವೆಂಬರ್ 2025 ರಲ್ಲಿ ತೆರವು ಗೊಳಿಸಲಾಗಿರುತ್ತದೆ.<br><br>ಮುಂದುವರೆದು, 01 ಕೀಟನಾಶಕ ಘಟಕವು ಪರಿಸರ ಕಾಯ್ದೆ 1986ರನ್ನು ಉಲ್ಲಂಘಿಸಿದ್ದರಿಂದ, ಸದರಿ ಕಾಯ್ದೆಯಡಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾರ್ಚ್ 2024 ರಲ್ಲಿ ಮುಚ್ಚುವ ಆದೇಶವನ್ನು ನೀಡಿ, ನಂತರ ಅನುಪಾಲನಾ ವರದಿಯಂತೆ ಮುಚ್ಚುವ ಆದೇಶವನ್ನು ಆಗಸ್ಟ 2024ರಲ್ಲಿ ತೆರವು ಗೊಳಿಸಲಾಗಿರುತ್ತದೆ.<br><br>ಈ ಹಿಂದೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಹುಮನಾಬಾದ್ ಕೈಗಾರಿಕಾ ಪ್ರದೇಶದಿಂದ ಕಾರಂಜ ಜಲಾಶಯದವರೆಗೆ ಹರಿಯುವ ನಾಲಾದ ಸುಮಾರು 9 ವಿವಿಧ ಸ್ಥಳಗಳಲ್ಲಿ ನೀರಿನ ಮಾದರಿಗಳನ್ನು ದಿನಾಂಕ 07.08.2023 ರಂದು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ವಿಶ್ಲೇಷಿಸಿದ್ದು, ಸದರಿ ಮಾದರಿಗಳ ವಿಶ್ಲೇಷಣಾ ವರದಿಯ ಪ್ರಕಾರ ನೀರಿನ ಗುಣಮಟ್ಟವು ನಿಗದಿತ ಗುಣಮಾನಕ್ಕೆ ಹೊಂದಿರುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳು ಹಾಗೂ ಜಲ ಮೂಲಗಳನ್ನು ನಿಯಮಿತವಾಗಿ ಮಾಪನ ಮಾಡುತ್ತಿದ್ದು, ದಿನಾಂಕ: 08.07.2024ರಂದು ಹುಮನಾಬಾದ್ ಪ್ರದೇಶದಲ್ಲಿ ಹರಿಯುವ ನಾಲೆಯ ನೀರನ್ನು ಪರೀಕ್ಷಿಸಿದ್ದು, ನೀರಿನ ಗುಣಮಟ್ಟವು ನಿಗದಿತ ಗುಣಮಾನಕ್ಕೆ ಹೊಂದಿರುತ್ತದೆ.<br><br>ಮುಂದುವರೆದು, ದಿನಾಂಕ: 13.08.2025 ರಂದು ಮಾಣಿಕನಗರ, ಗಡವಂತಿ, ಬಸಂತಪೂರ ಮತ್ತು ಮೋಳಕೇರಿ ಗ್ರಾಮದಲ್ಲಿ ಇರುವ ಬೋರ್‌ವೆಲ್ ಮತ್ತು ಬಾವಿಗಳಲ್ಲಿ ಕುಡಿಯುವ ನೀರಿನ ಮಾದರಿಗಳನ್ನು |

| | | |
|---|---|---|
| | | ಗ್ರಾಮಪಂಚಾಯತ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ವಿಶ್ಲೇಷಿಸಿದ್ದು, ಸದರಿ ಮಾದರಿಗಳ ವಿಶ್ಲೇಷಣಾ ವರದಿಯ ಪ್ರಕಾರ ನೀರಿನ ಗುಣಮಟ್ಟವು ನಿಗದಿತ ಗುಣಮಾನಕ್ಕೆ ಹೊಂದಿರುತ್ತದೆ.<br><br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ಉದ್ದಿಮೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಉದ್ದಿಮೆಯ ಆವರಣದಲ್ಲೇ ಶುದ್ಧೀಕರಿಸಿ ಶೂನ್ಯ ತ್ಯಾಜ್ಯ ವಿಸರ್ಜನೆಯನ್ನು (Zero Liquid Discharge - ZLD) ಖಾತರಿಪಡಿಸಲಾಗುತ್ತಿದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಕೈಗಾರಿಕಾ ಪ್ರದೇಶಗಳ ಎಲ್ಲಾ ಉದ್ದಿಮೆಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿ ಯಾವುದೇ ಉದ್ದಿಮೆಯು ಮಂಡಳಿ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸದಂತೆ ಕ್ರಮವಹಿಸಲಾಗುತ್ತಿದೆ. |

**ಸಿಐ 379 ಎಸ್‌ಪಿಐ 2025**

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು